ದಿ.22.12.2023 ರಂದು ಸಾಕ್ಷಿಯನ್ನು ಪುನಃ ಕರಿಸಿ ಪ್ರಮಾಣಿಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಆರೋಪಿತರ ಪರ ಶ್ರೀ. ಸಿ.ಎಸ್. ಎಂ. ವಕೀಲರಿಂದಃ**

1. ನಾನು ಪಿರಿಯಾಪಟ್ಟಣ ತಾಲೂಕಿನಲ್ಲಿ ಸುಮಾರು 8 ವರ್ಷಗಳಿಂದ ಆಹಾರ ನಿರೀಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನಮ್ಮ ಹಿರಿಯ ಉಪ ನಿರ್ದೇಶಕರಿಗೆ ಬಂದ ಬಾತ್ಮಿಯ ಮೇರೆಗೆ ನಾವು ಅವರೊಂದಿಗೆ ಸ್ಥಳಕ್ಕೆ ಹೋದೆವು. ಅವರು ಮೈಸೂರಿನಿಂದ ಪಿರಿಯಾಪಟ್ಟಣಕ್ಕೆ ಬಂದು ನನ್ನನ್ನು ಕರೆದುಕೊಂಡು ಸ್ಥಳಕ್ಕೆ ಹೊಗಿರುತ್ತಾರೆ. ಪಿರಿಯಾಪಟ್ಟಣ ತಾಲೂಕಿನಲ್ಲಿ ಘಟನಾ ಕಾಲಕ್ಕೆ ನಾನು ಒಬ್ಬನೇ ಆಹಾರ ನಿರೀಕ್ಷನಾಗಿದ್ದೆ. ಆ ಸಮಯದಲ್ಲಿ ಅತ್ತಿಗೋಡು ಗ್ರಾಮ ಬೆಟ್ಟದಪುರ ಹೋಬಳಿಗೆ ಸೇರಿತ್ತು. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಎರಡು ಆಹಾರ ಪರಿವಿಕ್ಷಣಾ ನಿರೀಕ್ಷಕರು ಇದ್ದಾರೆ. ಆ ಸಮಯದಲ್ಲಿ ನಾನು ಪಿರಿಯಾಪಟ್ಟಣದಲ್ಲಿ ಆಹಾರ ಪರಿವಿಕ್ಷಣಾ ನಿರೀಕ್ಷಕನಾಗಿ ಕೆಲಸ ನಿರ್ವಹಿಸುತ್ತಿದ್ದೆ. ಆ ಸಮಯದಲ್ಲಿ ಬೆಟ್ಟದಪುರ ಹೋಬಳಿ ಆಹಾರ ಪರೀವಿಕ್ಷಕನ ಹುದ್ದೆ ಖಾಲಿ ಇತ್ತು. ಆಗ ನಾನು ಪ್ರಭಾರದಲ್ಲಿ ಇದ್ದೆ.

2. ಆಹಾರ ಪಡಿತರ ಚೀಟಿಯಿಂದ ಪಡೆದಂತಹ ವಸ್ತುಗಳನ್ನು ಆರೋಪಿಯು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಆರೋಪಿತರು ಪಡಿತರ ಚೀಟಿ ಮುಖಾಂತರ ಪಡೆದ ಅಕ್ಕಿ ಮತ್ತು ಗೋಧಿಯನ್ನು ಖರೀದಿಸಿದ್ದ ವಸ್ತುಗಳನ್ನು ತಾವು ಪಡೆದಿದ್ದೇನೆ ಎಂದು ಹೇಳಿಕೆ ನೀಡಿದ್ದರು. ಸದರಿ ವಿಷಯವು ನನಗೆ ಖುದ್ದಾಗಿ ಗೊತ್ತಿಲ್ಲ.

3. ಆರೋಪಿತರು ಅಕ್ಕಿ ಮತ್ತು ಗೋಧಿಯನ್ನು ಪಡಿತರ ಚೀಟಿಯಿಂದ ಪಡೆದುಕೊಂಡಿಲ್ಲ ಮತ್ತು ಅವರು ಬೇರೆ ಕಡೆಯಿಂದ ಖರೀದಿಸಿದ್ದು ಎಂದರೆ ಸರಿಯಲ್ಲ. ಆರೋಪಿತರು ಅಕ್ಕಿ ಮತ್ತು ಗೋಧಿಯ ಸ್ವಂತ ವ್ಯಾಪಾರ ಮಾಡುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಕಡಿಮೆ ಬೆಲೆಗೆ ಅಕ್ಕಿ ಮತ್ತು ಗೋಧಿಯನ್ನು ಪಡೆದುಕೊಂಡು ಜಾಸ್ತಿ ಬೆಲೆಗೆ ಮಾರಾಟ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲಾತಿಗಳು ಇಲ್ಲ. ಆರೋಪಿತರು ಕಿರಾಣಿ ಪದಾರ್ಥಗಳನ್ನು ಮಾರಿಕೊಂಡು ಜೀವನ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಇಲಾಖಾ ಅಂಕಿ ಅಂಶಕ್ಕೊಸ್ಕರ ಮೇಲಾಧಿಕಾರಿಗಳು ಮತ್ತು ನಾವು ಸುಳ್ಳು ದೂರನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಯಾವುದೇ ಮಹಜರ್ ನ್ನು ಮಾಡಿಲ್ಲ, ಠಾಣೆಯಲ್ಲಿ ಕುಳಿತುಕೊಂಡು ತಯಾರಿಸಿದ್ದೇವೆ ಎಂದರೆ ಸರಿಯಲ್ಲ.

4. ಮಹಜರ್ ಸ್ಥಳದ ಚಕ್ಕುಬಂದಿ ಪೂರ್ವಕ್ಕೆ: ಪ್ರಕಾಶ ಶೆಟ್ಟಿಯವರ ಮನೆ, ಪಶ್ಚಿಮಕ್ಕೆ: ಸರ್ಕಾರಿ ಶೆಡ್ಡು, ಉತ್ತರಕ್ಕೇ ಜಮೀನು, ದಕ್ಷಿಣಕ್ಕೆ: ಸರ್ಕಾರಿ ರಸ್ತೆ ಇರುತ್ತದೆ. ಆರೋಪಿತರು ಯಾವುದೇ ಪಡಿತರ ಚೀಟಿಯಿಂದ ಪಡೆದ ವಸ್ತುಗಳನ್ನು ಮಾರಾಟ ಮಾಡುತ್ತಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ−1 ಮತ್ತು ನಾನು ಶಾಮಿಲಾಗಿ ಆರೋಪಿತರ ವಿರುದ್ಧ ಸುಳ್ಳು ಆರೋಪ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಚಾಸಾ−1 ರವರು ಟಿ.ಎ.ಪಿ.ಸಿ.ಎಂ.ಎಸ್. ನಲ್ಲಿ ಸುಮಾರು 500 ಕ್ವಿಂಟಲ್ ಅಕ್ಕಿಯನ್ನು ಮಾರಾಟ ಮಾಡಿಕೊಂಡು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡಿದ್ದಾರೆ

ಎಂದರೆ ಸರಿಯಲ್ಲ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ತನಿಖೆ ನಡಯುತ್ತಿದೆ ಎಂದರೆ ಸರಿಯಲ್ಲ. ಆದ್ದರಿಂದ ಅವರು ಇದುವರೆಗೂ ನಿವೃತ್ತಿ ಪಿಂಚಣಿ ಪಡೆಯುತ್ತಿಲ್ಲ ಎಂದರೆ ಸರಿಯಲ್ಲ.

6. ಚಾಸಾ–1 ರವರು ಯಾವುದೇ ದಾಳಿಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು ಚಾಸಾ–1 ರವರಿಗೂ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ .

7. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದೂರನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚ್‌ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.,**

**ಪಿರಿಯಾಪಟ್ಟಣ.**